ಇಷ್ಟೇ. ಲಗ್ನ ಪತ್ರಿಕೆ ಗಿರಿಜತ್ತಿಗೆಯ ಕೈಗೆ ಬಂದಾಗಿಂದಲೂ ಗಳಿಗಕ್ಕೊಮ್ಮೆ ಓದುವುದು ಇಷ್ಟೇ!! ಮುಂದೆ ಓದಲು ಗಿರಿಜತ್ತಿಗೆಗೆ ನಾಲಿಗೆ ಹೊರಳಿದರಲ್ಲವೇ...

ನವಿಲಿನ ಬಣ್ಣದ ಮೈಯಿರುವ ಬಂಗಾರ ಬಣ್ಣದ ಅಂಚಿನ ರೇಷ್ಮೆ ಸೀರೆ, ಸೀರೆಗೊಪ್ಪುವ ಪಲಕ, ಸೀರೆಯಡಿಗೆ ತೊಡಲು ಅಚ್ಚ ನೀಲಿಯ ಲಂಗ... ಎಲ್ಲವನ್ನೂ ಕಬ್ಬಿಣದ ಕಪಾಟಿನಿಂದ ತೆಗೆದು ಮಂಚದ ಮೇಲಿಟ್ಟು ಮೀಯಲು ಹೋದ ಗಿರಿಜತ್ತಿಗೆ ಈ ಸುಡು ಸುಡು ಸೆಕೆಗಾಲದಲ್ಲೂ ಬಿಸಿ ನೀರು ಮೈಗೆ ಹೊಯ್ದು ಕಾಟಾಚಾರಕ್ಕೆ ಮಿಂದ ಶಾಸ್ತ್ರ ಪೂರೈಸಿ ಅಂಗವಸ್ತ್ರ ತೊಟ್ಟು ಕೋಣೆ ಸೇರಿದಳು. ಅಲ್ಲೇ ಮಾಡ್ಗುಳಿಯಲ್ಲಿಟ್ಟಿದ್ದ ಲಗ್ನ ಪತ್ರಿಕೆ ತೆಗೆದು ಮತ್ತೆರಡು ಬಾರಿ ಓದಿದಳು. ನಮ್ಮ ಶೋಭನ ಮಗಳು ರಾಧಾನ ಮದುವೆ, ಇವತ್ತೇಯ... ಇಂದು ಮಧ್ಯಾಹ್ನ ಊಟದ ಹೊತ್ತಿಗೆಲ್ಲ ನಮ್ಮ ಹುಡುಗಿ ರಾಧಾ ಮದುವೆಯಾಗಿ, ಹೆಂಗಸಿನಂತೆ ಕಾಲ್ಬೆರಳಿಗೆ ಉಂಗುರ, ಕುತ್ತಿಗೆಗೆ ಅರಿಸಿನದ ದಾರ, ಎರಡೆಳೆ ಕರಿಮಣಿ ಸರ... ಹಮ್ಮ್... ನಮ್ಮ ಪಾಲಿಗೆ ಪೂರ್ತಿಯಾಗಿ ಕಳೆದುಹೋಗುತ್ತಾಳೆ.

ಇಸ್ತ್ರಿ ಹಾಕಿಟ್ಟ ನವಿಲು ಬಣ್ಣದ ಸೀರೆ ಕಬ್ಬಿಣ ಕಪಾಟಿನಲ್ಲಿ ಡಾಂಬರು ಗುಳಿಗೆಗಳ ನಡುವೆ ದಿನ ಕಳೆದು ಈಗ ನೆಟ್ಟಗೆ ನೆರಿಗೆ ಇಟ್ಟರೂ ಸೊಟ್ಟಗೆ ನಿಲ್ಲುವ ಆವೇಶದಲ್ಲಿತ್ತು. ಎಂತೆಂತಹ ಕೊರಟು ಸೀರೆಗಳನ್ನು ಮಣಿಸಿ ಹೇಳಿದಂತೆ ಕೇಳಿಸುವುದು ಗಿರಿಜತ್ತಿಗೆಗೆ ಹೊಸದಲ್ಲ. ಆದರೆ ರಾಧಾಳಿಗೆ ಕಾಲೇಜು ತುಳಿದ ದಿನಗಳಲ್ಲಿ ಎಲ್ಲವೂ ಹೊಸತಾಗಿತ್ತು. ಎಂತಹ ಕಾರ್ಯಕ್ರಮವಿರಲಿ, ಸಮಾರಂಭವಿರಲಿ ಸೀರೆ ಉಡಬೇಕು ಎಂದಾಕ್ಷಣ ಸ್ಕೂಟಿ ಹಿಡಿದು ಹೆಬ್ಬಾಲದ ಓಣಿ ದಾಟಿ ಬಂದುಬಿಡುತ್ತಿದ್ದಳು. ಅವಳಮ್ಮ ಶೋಭ ಅವಳಿಗೆ ಸೀರೆ ಉಡಿಸಿದರೆ ಸರಿಯೇ ಆಗುತ್ತಿರಲಿಲ್ಲ.

‘ಅಮ್ಮ ಸೀರೆ ಉಡಿಸಿದರೆ ಜಾರಿದಂತಾಗುತ್ತದೆ, ಹೊಕ್ಕಳ ಕೆಳಗೆ ಸೀರೆ ಉಡಿಸುತ್ತಾಳೆ...’ ಎಂಬೆಲ್ಲ ಸಾವಿರ ಪುಕಾರುಗಳಿರುತ್ತಿದ್ದವು.

ಇಷ್ಟೆಲ್ಲ ಮಾತಾಡಿದರೂ ಸೀರೆಯನ್ನು ಬಲಬದಿಯಿಂದ ಸುತ್ತಬೇಕೊ ಅಥವಾ ಎಡಬದಿಯಿಂದಲೋ ಅಂತಲೂ ಗೊತ್ತಿರಲಿಲ್ಲ ಪುಣ್ಯಾತ್ಗಿತ್ತಿ ರಾಧಾಳಿಗೆ. ನೆರಿಗೆ ಕೊಚ್ಚಿ, ಸೆರಗು ಮಾಡಿ ಪೈಟಗೆ ನಾಲ್ಕಾರು ಪಿನ್ನು ಚುಚ್ಚಿ ಕೊಡಲು ಗಿರಿಜತ್ತಿಗೆಯೇ ಆಗಬೇಕಿತ್ತು. ಹೊಟ್ಟೆ ಚೂರೂ ಕಾಣದಂತೆ ಸೀರೆ ಉಡಿಸು ಎನ್ನುವ ಅಹವಾಲು ಬಿಟ್ಟರೆ ಮತ್ಯಾವ ರಗಳೆಯನ್ನೂ ರಾಧಾ ಕೊಟ್ಟಿದ್ದಿಲ್ಲ.

ಇವತ್ತು ಬೇರೆ ಯಾರೋ ಉಡಿಸಿದ ಸೀರೆಯಲ್ಲಿ ಮಂಟಪದ ನಡುವೆ ಕುಳಿತು ರಾಧಾ ನಾಚುತ್ತಾಳೆಂದರೆ ಗಿರಿಜತ್ತಿಗೆಗೆ ಹೇಗಾಗಬೇಡ?

ದಣಿ ಮಿಂದು ಬಂದಿದ್ದಕ್ಕೋ ಏನೋ ಕೈಯನ್ನು ತಿರುಮುರುಗಿಸುತ್ತ ನುಗ್ಗಿಸಿದರೂ ಪಲಕದ ತೋಳೊಳಗೆ ಗಿರಿಜತ್ತಿಗೆಯ ಕೈ ನುಗ್ಗುತ್ತಲೇ ಇರಲಿಲ್ಲ. ಎರಡು ಮೂರು ಬಾರಿ ತೆಗೆತೆಗೆದು ಪ್ರಯತ್ನಿಸಿದರೂ ಕೈಯಿ ಮುನ್ನುಗ್ಗಲೇ ಇಲ್ಲ.

ಗೋಡೆಗಂಟಿಸಿದ್ದ ಗಡಿಯಾರದ ಮುಳ್ಳಿಗೆ ಯಾರ ಹಂಗಿದೆ, ಓಡುತ್ತಲೇ ಇತ್ತು. ದಿಬ್ಬಣ ಹೊರಟು ಎದುರ್ಗೊಳ್ಳುವ ಕಾರ್ಯಕ್ರಮ ಮುಗಿದುಬಿಟ್ಟರೆ ಒಂದು ಥರ ಮುಜುಗರವಲ್ಲವೇ, ಬೇಕಂತಲೇ ತಡ ಮಾಡಿ ಬಂದರು ಎನ್ನುತ್ತಾರೆ ಎನ್ನುವುದೂ ಒಂದು ಭಯ ಗಿರಿಜತ್ತಿಗೆಗೆ.

ಎಂಟೂ ಮೂವತ್ತರ ಮುಳ್ಳು ನೋಡಿ ಇಷ್ಟೊತ್ತಿಗೆ ನಾಂದಿಗೆ ಕುಳಿತಿರಬೇಕೆಂದು ಅಂದಾಜಿಸಿ ಕೈ ಮೇಲೇರಿಸಲಾಗದ ಪಲಕ ತೆಗೆದು ಅಂಚಿನ ಒಂದು ಹೊಲಿಗೆಯನ್ನು ಬಿಡಿಸಲಾರಂಭಿಸಿದಳು.